**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ಸಿ.ಸಿ. ನಂ ಃ 693/2014

ಚಾ.ಸಾ ಃ 1

ಸಾಕ್ಷಿದಾರರ ಹೆಸರು ಃ ಮುರಗೇಶ

ತಂದೆಯ ಹೆಸರು ಃ ದಿ ಹರಿಶ್ಚಂದ್ರ

ಪ್ರಾಯ ಃ **51** ವರ್ಷ

ಉದ್ಯೋಗ ಃ ಎ ಎಸ್ ಐ ಪುತ್ತೂರು ಗ್ರಾಮಾಂತರ ಪೋಠಾಣೆ

ವಾಸಸ್ಥಾನ **:** ಪುತ್ತೂರು

ಪ್ರಮಾಣ ವಚನ ಭೋದಿಸಿದ ದಿನಾಂಕ ಃ 21.12.2023

**ಮುಖ್ಯ ವಿಚಾರಣೆಃ** ಕಲಂ **299** ಸಿಆರ್ ಪಿಸಿ ಅಡಿಯಲ್ಲಿಃ

ನಾನು 2022 ಪೆಬ್ರುವರಿಯಿಂದ ಇಲ್ಲಿಯವರೆಗೆ ಪುತ್ತೂರು ಗ್ರಾಮಾಂತರ ಪೊ.ಠಾಣೆಯಲ್ಲಿ ಎಎಸ್ಐ ಎಂದು ಕೆಲಸ ನಿರ್ವಹಿಸುತ್ತಿದ್ದೇನೆ.

ದಿಃ 30-05-2023 ರಂದು ನ್ಯಾಯಾಲಯವು ಹೊರಡಿಸಿದ ಪ್ರೊಕ್ಲೆಮೇಷನ ಪ್ರಕಾರ ನಾನು ಕೆದಂಬಾಡಿ ಗ್ರಾಮದ ತಿಂಗಳಾಡಿ ಎಂಬಲ್ಲಿ ಹೋಗಿ ಪಂಚರಾದ ಶೀನಪ್ಪ ಗೌಡ, ಕಿರಣಕುಮಾರವರನ್ನು ಕರೆಯಿಸಿ ಗ್ರಾಮ ಪಂಚಾಯತ ಕಚೇರಿಗೆ ಹೋಗಿ ಅಲ್ಲಿ ಸಿಬ್ಬಂದಿಯಾದ ಮೃದುಲಾ ರವರ ಸಮಕ್ಷಮ ಸಾರ್ವಜನಿಕರಿಗೆ ಟಾಂ ಟಾಂ ಮಾಡಿ ಮಾನ್ಯ ನ್ಯಾಯಾಲಯ ನೀಡಿದ ಒಂದು ಪ್ರೊಕ್ಲೊಮೆಷನ ಕಾಪಿಯನ್ನು ಗ್ರಾಮ ಫಲಕದಲ್ಲಿ ಅಂಟಿಸಿ ತಿಂಗಳ ಬಸ್ಟ್ಯಾಂಡಿಗೆ ಬಂದು ಸಾರ್ವಜನಿಕರಿಗೆ ಟಾಂ ಟಾಂ ಹೋರಡಿಸಿ ಮಾನ್ಯ ನ್ಯಾಯಾಲಯ ನೀಡಿದ ಒಂದು ಪ್ರೊಕ್ಲೊಮೆಷನ ಕಾಪಿಯನ್ನು

ತಿಂಗಳಾಡಿಯ ಬಸ್ಸು ನಿಲ್ದಾಣದಲ್ಲಿ ಅಂಟಿಸಿ, ಆರೋಪಿ ಮನೆಯಾದ ರಾಮನಗರಕ್ಕೆ ಹೋಗುವ ರಸ್ತೆಯ ಬದಿಯಲ್ಲಿರುವ ಸಮಾಜ ಮಂದಿರ ಹೊರಗೆ ಸಾರ್ವಜನಿಕ ಟಾಂ ಟಾಂ ಮಾಡಿ ಮಾನ್ಯ ನ್ಯಾಯಾಲಯ ನೀಡಿದ ಒಂದು ಪ್ರೊಕ್ಲೊಮೆಷನ ಕಾಪಿಯನ್ನು ಅಲ್ಲಿ ಅಂಟಿಸಿದ್ದೇನೆ.

<u>ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಮುಂದುಡಲಾಯಿತು.</u>

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.